## ಕಮಂಡಲ ಗಣಪತಿ

ಇದು ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲೂಕಿನ ಕೆಸವೆ ಗ್ರಾಮದಲ್ಲಿರುವ ಗಣಪತಿ ದೇಗುಲ. ಇಲ್ಲಿನ ವಿಶೇಷವೇನೆಂದರೆ ಯೋಗಮುದ್ರೆಯಲ್ಲಿರುವ ಗಣಪ ಮತ್ತು ಗಣಪನ ಮುಂಭಾಗದಲ್ಲಿ ಕಮಂಡಲಾಕಾರದಲ್ಲಿ ಸದಾ ಹರಿಯುತ್ತಿರುವ ನೀರಿನ ಚಿಲುಮೆ. ಇದನ್ನು ಕಮಂಡಲ ತೀರ್ಥ ಎನ್ನುತ್ತಾರೆ. ಇದು ಬ್ರಾಹ್ಮೀ ನದಿಯ ಉಗಮ ಸ್ಥಾನವಾಗಿದೆ. ಇದರ ಹಿಂದೆ ಪುರಾಣ ಪ್ರಸಿದ್ಧ ಕಥೆಯೊಂದಿದೆ. ಪಾರ್ವತಿ ದೇವಿ ಶನಿಕಾಟ ಆರಂಭವಾದಾಗ ತಪಸ್ಸು ಮಾಡಲು ಭೂಮಂಡಲಕ್ಕೆ ಬಂದ ಸ್ಥಳವಂತೆ ಈ ದೇಗುಲ. ತಪಸ್ಸಿನ ಬಳಿಕ ವಿಘ್ನೇಶ್ವರನ ಪೂಜೆ ಮಾಡಲು ಹೊರಟಾಗ ನೀರಿನ ಅಭಾವವಾಗಿ ಬ್ರಹ್ಮದೇವನನ್ನು ಸ್ಮರಿಸಿದಳಂತೆ. ಆಗ ಬ್ರಹ್ಮದೇವ ಬಾಣ ಹೊಡೆದ ಸ್ಥಳದಲ್ಲಿ ನೀರಿನ ಚಿಲುಮೆ ಉಕ್ಕಿ ಹರಿಯಿತಂತೆ.

ಇಲ್ಲಿ ನೀರು ಬತ್ತಿದ ಉದಾಹರಣೆಯೇ ಇಲ್ಲ. ಮಳೆಗಾಲದಲ್ಲಿ ಗಣಪನ ಪಾದದವರೆಗೂ ನೀರು ಉಕ್ಕಿ ಹರಿಯುತ್ತದೆ. ದಟ್ಟ ವನಸಿರಿಯ ಮಧ್ಯದಲ್ಲಿರುವ ಈ ದೇಗುಲ ಸಾವಿರಾರು ಭಕ್ತರ, ಪ್ರವಾಸಿಗರ ನೆಚ್ಚಿನ ತಾಣವಾಗಿದೆ.

**-ಉಮಾ ಶಿವಶಂಕರ್, ಶಿವಮೊಗ್ಗ**





## ಚಾಕೊಲೇಟ್!

ಬಣ್ಣ ಬಣ್ಣದ ಕಲ್ಲು ಹರಳುಗಳನ್ನು ಪಾತಿಗಳಲ್ಲಿ ಗಿಡದ ಸುತ್ತ ಹರಡಿದರೆ ನೋಡುವುದೇ ಬಲು ಸೊಗಸು. ಆದರೆ ಇವು ಕಲ್ಲು ಹರಳುಗಳಲ್ಲ. ಅದರಂತೆ ಕಾಣುವ ಚಾಕೊಲೇಟ್‌ಗಳು. ತಿನ್ನಲು ಬಲು ಮಧುರ, ನೋಡಲು ಬಲು ಚಂದ.

**-ಬಿ.ಎಸ್.ಚಂದ್ರಕಲ, ಬೆಂಗಳೂರು**

## ಹೆಂಚಿನದ್ದೇ ಕಾಂಪೌಂಡ್!

ಮನೆಯ ಮಾಡಿಗೆ ಹೆಂಚು ಬಳಸುವುದು ಸಾಮಾನ್ಯ. ಈಗೀಗ ಆರ್‌ಸಿಸಿ ಬಿಲ್ಡಿಂಗುಗಳೇ ಜಾಸ್ತಿಯಾಗಿ ಹೆಂಚಿನ ಮನೆಗಳ ನಿರ್ಮಾಣ ಕಡಿಮೆಯಾಗುತ್ತಿದೆ. ಆದರೆ ನಾಡಹೆಂಚುಗಳ ಬದಲಿಗೆ ಡಿಸೈನರ್ ಹೆಂಚುಗಳನ್ನು ಆರ್‌ಸಿಸಿ ಬಿಲ್ಡಿಂಗುಗಳ ಅಂದ ಹೆಚ್ಚಿಸಲು ಬಳಸುವುದೂ ಜಾಸ್ತಿಯಾಗಿದೆ. ಉಡುಪಿ ಜಿಲ್ಲೆ ಮದಗ ಸಮೀಪದ ಪರೀಕ ಮಹಾಲಿಂಗೇಶ್ವರ ದೇವಸ್ಥಾನದ ಎದುರಿರುವ ಮನೆಯೊಂದರಲ್ಲಿ ಮನೆಯ ಮಾಡಿಗೆ ಹೆಂಚು ಬಳಸುವ ಬದಲು ಮನೆಯ ಸುತ್ತಲಿನ ಇಡೀ ಕಾಂಪೌಂಡನ್ನೇ ಹೆಂಚುಗಳನ್ನೇ ಜೋಡಿಸಿ ಕಟ್ಟುವ ಮೂಲಕ ಹೆಂಚುಗಳ ಇನ್ನೊಂದು ಉಪಯೋಗವನ್ನೂ ತೋರಿಸಿಕೊಟ್ಟಿದ್ದಾರೆ.

ಉಪಯೋಗಕ್ಕಿಲ್ಲದ ಹೆಂಚುಗಳನ್ನೇ ಬಳಸಿಕೊಂಡು ಕಾಂಪೌಂಡ್ ನಿರ್ಮಾಣದಲ್ಲೂ ಹೊಸತನ ಮೆರೆದಿದ್ದಾರೆ ಅನ್ನಿಸದೇ ಇರಲಾರದು.

**-ಆರುಡೋ ಗಣೇಶ, ಕೋಡೂರು**

